ಯೂಟ್ಯೂಬ್ ವಿಡಿಯೊ ತೋರಿಸುತ್ತದೆ. ಸಿಂಗಲ್ ಪೇರೆಂಟ್ ಆಗಿರುವ ನಾನು, ಮೊಬೈಲ್ ಅನ್ನೇ ಅವಲಂಬಿಸಿ ಅನೇಕ ಸಂದಿಗ್ಧಗಳನ್ನು ದಾಟಿಕೊಂಡು ಬಂದಿದ್ದೇನೆ. ಅದಿರಲಿ, ಎಲ್ಲವನ್ನೂ ಮೊಬೈಲ್‌ನೊಳಗೇ ಸೇರಿಸಿ ಬದುಕನ್ನು ಮೊಬೈಲ್ ಕೇಂದ್ರೀಕರಣಗೊಳಿಸುವ ಬದಲು, ಮನೆಯಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಿರುವ ಮನೆಗಳಿಗೆ, ಮಕ್ಕಳಿಗೆ ಹೊಂದುವಂತಹ ಮೊಬೈಲ್‌ಗಳು ಯಾಕೆ ಮಾರುಕಟ್ಟೆಗೆ ಬರಬಾರದು? ಡಿಲೀಟ್ ಆಗಿರುವ ಫೋಟೊಗಳನ್ನು ನೋಡುವುದು ಹೇಗೆ, ತಮ್ಮ ಮೊಬೈಲ್ ಅನ್ನು ಚೆಕ್ ಮಾಡಲಾಗಿದೆಯೇ ಎಂದು ಪತ್ತೆ ಮಾಡುವುದು ಹೇಗೆ? ಇಡೀ ಸ್ಕ್ರೀನ್ ಲಾಗಿನ್ ಅನ್ನೇ ಬದಲಾಯಿಸಿಕೊಂಡು ಪೋರ್ನ್ ನೋಟಿಫಿಕೇಶನ್‌ಗಳು ಬಾರದಂತೆ ತಡೆಯುತ್ತ, ಒಳ್ಳೆಯವರಂತೆ ನಟಿಸುವುದು ಹೇಗೆ... ಎಂಬೆಲ್ಲ ಅಂಶಗಳನ್ನು ಒದಗಿಸುವ ತಂತ್ರಜ್ಞಾನವು ಇಂದು ಬಂದಿದೆ. ಅದು ನೇರವಾಗಿ ಮಕ್ಕಳ ಕೈಗೆ ಸಿಗುತ್ತಿದೆ. ಆದರೆ ಓದುವ ಮಕ್ಕಳಿಗೆ ಏಕಾಗ್ರತೆಯನ್ನು ಮೂಡಿಸುವ ನಿಟ್ಟಿನಲ್ಲಿಯೂ ತಂತ್ರಜ್ಞಾನ ಪರಿಣತರು ಆಲೋಚನೆ ಮಾಡಬಹುದೇನೋ. ಅಥವಾ ಅಂತಹ ಸವಲತ್ತುಗಳು ಇದ್ದರೂ ಅವುಗಳ ಪ್ರಚಾರವಂತೂ ಬಹಳವೇ ಕಡಿಮೆ'.

ಹಿತಾ ಅವರ ಮಾತಿನಲ್ಲಿ ಸಿಟ್ಟು, ಆತಂಕ, ಕಾಳಜಿಗಳು ಒಟ್ಟಿಗೇ ಕಾಣಿಸುತ್ತವೆ. ಅವರ ಪ್ರಕಾರ, ನೈತಿಕತೆ ಎನ್ನುವುದು ನಿರಂತರವಾಗಿ ಬದಲಾಗುತ್ತಿರುವ ಪ್ರಕ್ರಿಯೆ. ಅದು ಪ್ರದೇಶ ಮತ್ತು ಕಾಲವನ್ನು ಆಧರಿಸಿ ಬದಲಾಗುತ್ತದೆ. ಆದಾಗ್ಯೂ ಕೆಲವೊಂದು ಮೌಲ್ಯಗಳನ್ನು ಮನುಕುಲವು ಸ್ವಯಂಪ್ರಜ್ಞೆಯಿಂದ ಕಾಪಿಟ್ಟುಕೊಳ್ಳಬೇಕು. ತಂತ್ರಜ್ಞಾನ ಮತ್ತು ನಗರ ಜೀವನದ ಒತ್ತಡಗಳು ಹಾಗೂ ನಗರ ಜೀವನ ಶೈಲಿಯಲ್ಲಿ ನೈತಿಕತೆಯನ್ನು ಕಾಪಿಟ್ಟುಕೊಳ್ಳುವುದು ಹೇಗೆ ಎಂಬುದನ್ನು ಮಕ್ಕಳಿಗೆ ಕಲಿಸುವುದು ಇಂದು ಸವಾಲಿನ ಪ್ರಶ್ನೆಯಾಗಿದೆ.

'ಸಣ್ಣದೊಂದು ಉದಾಹರಣೆ ನೋಡಿ: ಸಾರ್ವಜನಿಕ ಸ್ಥಳಗಳಲ್ಲಿ ಓಡಾಡುವ ಜನರ ವಿಡಿಯೊಗಳು, ಮಕ್ಕಳ ಫೋಟೊ ಮತ್ತು ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ, ವೈಯಕ್ತಿಕ ನೆಟ್‌ವರ್ಕ್‌ಗಳಲ್ಲಿ ಹಂಚಿಕೊಳ್ಳುವುದು ವ್ಯಕ್ತಿಯೊಬ್ಬರ ಖಾಸಗಿತನಕ್ಕೆ ಧಕ್ಕೆ ತರುವ ವಿಷಯ. ಆದರೆ ಇಂದು ಕುಂತರೆ ನಿಂತರೆ ವಿಡಿಯೊಗಳನ್ನು ಮಾಡುವ ಹಾಗೂ ಫೋಟೊಗಳನ್ನು ತೆಗೆಯುವ ಮಕ್ಕಳ ಬಳಿ ಖಾಸಗಿತನದ ಬಗ್ಗೆ ಮಾತನಾಡುವುದೇ ಸಾಧ್ಯವಿಲ್ಲ ಎಂಬಂತಾಗಿದೆ. ರೀಲ್‌ಗಳು ಮತ್ತು ವಿಡಿಯೊಗಳ ಹುಚ್ಚು, ಖಾಸಗಿತನದ ಹಂಗಿಲ್ಲದೆ ಎಲ್ಲವೂ ಮುಕ್ತ ಮುಕ್ತ ಎಂದು ಬಾಳುವೆ ನಡೆಸುವುದಕ್ಕೆ ಮಕ್ಕಳು ಸಜ್ಜಾಗುತ್ತಿರುವುದು ಕಣ್ಣೆದುರು ಗೋಚರಿಸುತ್ತಿದೆ. ಈ ಡಿಜಿಟಲ್ ಮುಕ್ತ ಅಭಿವ್ಯಕ್ತಿಯಿಂದ ಸ್ವಯಂ ಅವರಿಗೇ ಆಗುವ ನಷ್ಟಗಳೇನು ಎಂಬುದನ್ನು ಅವರು ಅಂದಾಜು ಮಾಡಿಕೊಳ್ಳಲಾರದವರಾಗಿದ್ದಾರೆ. ಆ ನಿಟ್ಟಿನಲ್ಲಿ ಅವರಿಗಾಗಿ ಬೇರೆಯವರು ಯೋಚಿಸಬೇಕಾಗಿದೆಯೇ? ಹಾಗೆ ಯೋಚಿಸುವುದಾದರೆ ಯಾರದು?' ಹಿತಾ ಅವರ ಮಾತುಗಳ ಬಗ್ಗೆ ಪಾಲಕರು ಹಾಗೂ ಸಮಾಜದ ಹಿತದ ಬಗ್ಗೆ ಯೋಚಿಸುವ ಎಲ್ಲರೂ ಗಂಭೀರವಾಗಿ ಚಿಂತಿಸಬೇಕಾಗಿದೆ.


## ಮಕ್ಕಳ ರಾಜ್ಯ ಕಿರಿದಾಗಿದೆ; ಅಮ್ಮಂದಿರ ಉಸಿರುಗಟ್ಟುತ್ತಿದೆ

'ಹೊಸ ಅಮ್ಮಂದಿರು ಮಕ್ಕಳ ಮೊಬೈಲ್ ಚಟದ ಬಗ್ಗೆ ತುಂಬಾ ಬೇಸರ ವ್ಯಕ್ತಪಡಿಸುತ್ತಾರೆ. ಆದರೆ ಮಕ್ಕಳ ಮುಂದೆ ತಾವು ಮೊಬೈಲ್‌ನಿಂದ ದೂರ ನಿಂತು ಅವರಿಗೆ ಮಾದರಿಯಾಗಬೇಕು ಎಂಬುದನ್ನು ಮರೆತುಬಿಡುತ್ತಾರೆ' ಎನ್ನುವುದು ಲೇಖಕಿ ಹಾಗೂ ಪೌಷ್ಟಿಕಾಂಶ ತಜ್ಞೆ ಪಲ್ಲವಿ ಇಡೂರು ಅವರ ಅನುಭವದ ಮಾತು.

'ಫೋನ್ ದೂರ ಇಡು, ಓದ್ಕೋ...' ಎನ್ನುವುದು ಇಂದು ಎಲ್ಲ ಮನೆಗಳಲ್ಲಿಯೂ ಕೇಳಿಬರುವ ಸಾಮಾನ್ಯ ಆಲಾಪವಾಗಿಬಿಟ್ಟಿದೆ. ಆದರೆ ಮಕ್ಕಳು ಮೊಬೈಲ್‌ನತ್ತ ಮುಖ ಮಾಡಲು ಕಾರಣಗಳೇನು ಎಂಬುದು ಗೊತ್ತಿದ್ದರೂ ಪೋಷಕರು ಅದರ ಬಗ್ಗೆ ಕಿಂಚಿತ್ ಬದಲಾಗಲೂ ಮನಸ್ಸು ಮಾಡುತ್ತಿಲ್ಲ. ಹಳ್ಳಿಗಳಲ್ಲಿ ಹಿಂದೆ ಮಕ್ಕಳ ಪಾಲಿಗೆ ಇಡೀ ಊರೇ ಅವರದ್ದಾಗಿತ್ತು. ಮಾವಿನ ಮರ, ರಸ್ತೆಯಲ್ಲಿ ಆಗೊಮ್ಮೆ ಈಗೊಮ್ಮೆ ಬರುವ ವಾಹನ, ಹಳ್ಳ ಕೊಳ್ಳ, ಗದ್ದೆ ತೋಟಗಳಲ್ಲೆಲ್ಲಾ ಓಡಾಡುತ್ತ ಮಕ್ಕಳು ಮಜವಾಗಿದ್ದರು. ನಂತರ ನಗರೀಕರಣ ವ್ಯಾಪಕವಾದಾಗ ಮಕ್ಕಳು ರಸ್ತೆಯಲ್ಲಿ ದೊಡ್ಡ ಪಟಾಲಂ ಕಟ್ಟಿಕೊಂಡು ಚೆನ್ನಾಗಿ ಆಟವಾಡಿದ್ದುಂಟು. ಆದರೆ ಇಂದು ನಗರದ ಬದುಕು ಅಷ್ಟೊಂದು ಸರಳವಾಗಿಲ್ಲ. ಮಕ್ಕಳನ್ನು ಮನೆಯಿಂದ ಹೊರಗೆ ಕಳುಹಿಸುವುದಕ್ಕೆ ಪೋಷಕರಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಹೊಸ ಅಮ್ಮಂದಿರ ಮುಂದಿರುವ ಸವಾಲು ಮಕ್ಕಳ ಭದ್ರತೆಯದ್ದು. ಮಕ್ಕಳ ಮೇಲಿನ ದೌರ್ಜನ್ಯದ ವರದಿಗಳನ್ನು ಕೇಳುವ ಅಪ್ಪ ಅಮ್ಮ, ಮನೆಯಿಂದ ಹೊರ ಹೋಗುವಾಗಲೇ ಮಗುವಿನ ಕೈಗೆ ಮೊಬೈಲು ಕೊಡುತ್ತಾರೆ. ಲೊಕೇಶನ್ ಚಾಲ್ತಿಯಲ್ಲಿಡು ಮಗಾ... ಎಂದು ಕಿವಿಮಾತು ಹೇಳುತ್ತಾರೆ. ನಿಜಕ್ಕೂ ಅಮ್ಮಂದಿರ ಈ ಭಯವನ್ನು ನಿವಾರಿಸುವವರು ಯಾರು?' ಎಂದು ಪಲ್ಲವಿ ಪ್ರಶ್ನಿಸುತ್ತಾರೆ.

ಹಳ್ಳಿಗಳಲ್ಲಿ ಎಲ್ಲವೂ ಸಲೀಸೆಂದುಕೊಂಡಿರಾ? ಇಲ್ಲ, ಅಲ್ಲೊಂದು ಇಲ್ಲೊಂದು ಎಂಬಂತೆ ಮನೆಗಳಲ್ಲಿ ಒಬ್ಬರೋ ಇಬ್ಬರೋ ಹಿರಿಯರಷ್ಟೇ ಇರುವುದರಿಂದ ಮಗುವನ್ನು ಮನೆಯಿಂದ ಹೊರಕ್ಕೆ ಕಳುಹಿಸುವುದೇ ಬೇಡವೆಂದು ಅಮ್ಮ ತಾಕೀತು ಮಾಡಿಬಿಡುತ್ತಾಳೆ. ಹಿತವಾದ ತಂಗಾಳಿಯ ಸವಿಯನ್ನು ಉಣ್ಣಲು ಮಗುವಿಗೆ ಪೂರಕ ವಾತಾವರಣ ದೊರೆಯುವುದು ಸುಲಭವಲ್ಲ... ಹಾಗಿದ್ದರೆ?

'ಮನೆಗೊಂದು ಮಗು ಇರುವುದರಿಂದ ಮಗು ಪೂರ್ತಿಯಾಗಿ ಪೋಷಕರಿಗೆ ಅಂಟಿಕೊಂಡಿರುತ್ತದೆ. ಬಾಲ್ಯದಲ್ಲಿ ಮುಕ್ತವಾದ ಉತ್ತಮ ಸ್ನೇಹವನ್ನು ಸಂಪಾದಿಸುವುದಕ್ಕೆ ಮಕ್ಕಳಿಗೆ ಅವಕಾಶವೇ ಇಲ್ಲವಾಗಿದೆ. ಹೆಚ್ಚೆಂದರೆ ಪೋಷಕರ



ಅಮ್ಮಂದಿರ ಬಗೆಹರಿಯದ ಸಮಸ್ಯೆ: ಮೊಬೈಲ್ ಗೀಳಿನಿಂದ ಮಕ್ಕಳನ್ನು ಹೊರತರುವುದು ಹೇಗೆ?